**ಸಾಕ್ಷಿಯನ್ನು ದಿನಾಂಕಃ 24.10.2024 ರಂದು ಕರೆದು ಪ್ರಮಾಣ ವಚನ ಮಾಡಿಸಲಾಯಿತು.**

**ಮುಖ್ಯ ವಿಚಾರಣೆ ಃ ಶ್ರೀ ವಿ.ಜಿ.ಎನ್., ವಾದಿ ಪರ ವಕೀಲರಿಂದಃ**

**ನಾನು ನನ್ನ ಮುಖ್ಯ ವಿಚಾರಣೆ ಬದಲಿಗೆ ಪ್ರಮಾಣಪತ್ರ ಸಲ್ಲಿಸಿದ್ದು ಅದರಲ್ಲಿ ಇರುವ ಅಂಶಗಳನ್ನು ನಾನೇ ವಕೀಲರಿಗೆ ಹೇಳಿ ಬರೆಸಿರುತ್ತೇನೆ ಮತ್ತು ಅದರಲ್ಲಿನ ಅಂಶಗಳು ಸತ್ಯವಾಗಿರುತ್ತವೆ. ಅದರಲ್ಲಿ ನನ್ನ ಸಹಿ ಇದೆ.**

**ಪಾಟೀ ಸವಾಲುಃ ಶ್ರೀ ಎ.ಎಸ್.ವಾಯ್., ಪ್ರತಿವಾದಿ ನಂ.2 ರ ಪರ ವಕೀಲರಿಂದಃ**

ನಾನು ಚೆನ್ನಾಳ ಗ್ರಾಮದ ಜಮೀನು ಸರ್ವೆ ನಂ.68/1 ನ್ನು ಮೋಜನಿ ಮಾಡಿದ್ದೇನೆ. ಈ ಕಾಲಕ್ಕೆ ಅದೇ ಗ್ರಾಮದ ಸರ್ವೆ ನಂ.68/1 ರ ಬಾಜು ಇದ್ದ ಜಮೀನು ಸರ್ವೆ ನಂ.42 ಮತ್ತು 43 ಇವುಗಳನ್ನು ಸಹ ಮೋಜನಿ ಮಾಡಿದ್ದೇನೆ.

ಸದರಿ ಸರ್ವೆ ನಂ.42 ಮತ್ತು 43 ಜಮೀನುಗಳು ಸರ್ವೆ ನಂ.68/1 ರ ಉತ್ತರ ಬಾಜು ಬರುತ್ತವೆ. ಸರ್ವೆ ನಂ.68/1 ರ ಜಮೀನಿನ ಪೂರ್ವ, ಪಶ್ಚಿಮ ಹಾಗೂ ದಕ್ಷಿಣ ಬಾಜು ಇದ್ದ ಜಮೀನುಗಳನ್ನು ಕೂಡಾ ನಾನು ಮೋಜನಿ ಮಾಡಿದ್ದೇನೆ. ಸರ್ವೆ ನಂ.68/1 ರ ಪೂರ್ವಕ್ಕೆ ಯಾವ ಸರ್ವೆ ನಂಬರ ಜಮೀನು ಇದೆ ಎಂದು ನನಗೆ ನೆನಪಿಲ್ಲ. ಸರ್ವೆ ನಂ.68/1 ರ ಪಶ್ಚಿಮಕ್ಕೆ ಸರ್ವೆ ನಂಬರ 67 ರ ಜಮೀನು ಇದೆ. ಅದೇ ರೀತಿ ದಕ್ಷಿಣಕ್ಕೆ ಸರ್ವೆ ನಂ.66 ರ ಜಮೀನು ಇದೆ.

ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿ ಬರೆದಿರುವ ಸಂಗತಿಗಳನ್ನು ಓದಿಕೊಂಡೆ ಸಹಿ ಮಾಡಿದ್ದೇನೆ. ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ಸರ್ವೆ ನಂ.68/1 ರ ಪೂರ್ವ, ಪಶ್ಚಿಮ ಮತ್ತು ಉತ್ತರ ಹಾಗೂ ದಕ್ಷಿಣಕ್ಕೆ ಈ ಮೇಲೆ ಹೇಳಿದ ಜಮೀನುಗಳು ಇವೆ ಎನ್ನುವ ಕುರಿತು ನಮೂದಿಸಿಲ್ಲ.

ನಿ.ಪಿ.3 ರಲ್ಲಿ ಸರ್ವೆ ನಂ.68/1 ರ ಉತ್ತರಕ್ಕೆ ಸರ್ವೆ ನಂ.69 ಎಂದು ನಮೂದಿಸಲಾಗಿದೆ ಎಂದರೆ ಸರಿ. ನಿ.ಪಿ. 3 ರಲ್ಲಿ ಸರ್ವೆ ನಂ.42 ನ್ನು ನಮೂದಿಸಿಲ್ಲ ಎಂದರೆ ಸರಿ. ಅದೇ ರೀತಿ ಸರ್ವೆ ನಂ.68/1 ಪೂರ್ವಕ್ಕೆ ಸರ್ವೆ ನಂ.73 ಇದೆ. ನನ್ನ ಮೇಲಿನ ಪಾಟೀ ಸವಾಲಿನಲ್ಲಿ ಸರ್ವೆ ನಂ.67 ಎಂದು ಹೇಳಿದ್ದೇನೆ ಎಂದರೆ ಸರಿ.

ನಿ.ಪಿ. 3 ರಲ್ಲಿ ನಾನು ಸರ್ವೆ ನಂ.68/1 ರ ನಾಲ್ಕು ಬಾಜು ಯಾವ ಸರ್ವೆ ನಂಬರಿನ ಜಮೀನುಗಳು ಇವೆ ಹಾಗೂ ಅವುಗಳ ಕ್ಷೇತ್ರ ನಮೂದಿಸಿಲ್ಲ ಎಂದರೆ ಸರಿ. ನಾನು ತಯಾರಿಸಿದ ನಿ.ಪಿ. 3 ರನ್ನು ಪ್ರಶ್ನಿಸಿ ಪ್ರತಿವಾದಿಯರು ಮಾನ್ಯ ಎಡಿಎಲಆರ ಇವರ ಮುಂದು ಮೇಲ್ಮನವಿ ಸಲ್ಲಿಸಿದ್ದಾರೆ ಎಂದರೆ ಸರಿ. ಸದರಿ ಮೇಲ್ಮನವಿಯಲ್ಲಿ ನಿ.ಪಿ. 3 ಕ್ಕೆ ತಡೆಯಾಜ್ಞೆ ನೀಡಲಾಗಿದೆ ಎಂದರೆ ಸರಿ. ಸದರಿ ಮೇಲ್ಮನವಿ ಮುಂದೆ ಏನಾಯಿತು ಎಂದು ನನಗೆ ಗೊತ್ತಿಲ್ಲ.

ಮರು ವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು )

ಓ ಹೇ ಕೇ ಸರಿ ಇದೆ.

Sd/-

ಹೆಚ್ಚುವರಿ ದಿವಾಣಿ ನ್ಯಾಯಾಧೀಶರು

ಮುಧೋಳ.

ಸಾಕ್ಷಿಯ ಸಹಿ